# 18. ಸ.ಉ.ಕಿ.ಪ್ರಾ.ಶಾಲೆ, ತಿಪ್ಲಾಪುರ

ಉರ್ದು ಶಾಲೆಗಳಲ್ಲಿ ಉರ್ದು ಭಾಷೆಯ ಕಲಿಕೆಯೇ ಅಗ್ರಮಾನ್ಯ. ಆಂಗ್ಲ ಭಾಷೆಯ ಕಡೆಗೂ ಒಲವಿರುವ ಉರ್ದು ಶಾಲೆಗಳಲ್ಲಿ ಕನ್ನಡ ಕಲಿಕೆ ಸ್ವಲ್ಪ ಸೊರಗುವುದನ್ನು ಸಾಮಾನ್ಯವಾಗಿ ಕಾಣಬಹುದು. ಇಂತಹ ಸನ್ನಿವೇಶದಲ್ಲಿ ಉರ್ದು, ಆಂಗ್ಲಭಾಷೆ ಮತ್ತು ಕನ್ನಡ ಎಲ್ಲಾ ಭಾಷೆಗಳನ್ನು ಸಮಾನ ತಕ್ಕಡಿಯಲ್ಲಿ ತೂಗಿಕಲಿಸುವಂತಹ ಶಾಲೆಗಳು ವಿರಳ. ಭದ್ರಾವತಿಯಿಂದ 11 ಕಿ.ಮೀ.ದೂರದಲ್ಲಿರುವಸ. ಕಿ.ಪ್ರಾ.ಶಾಲೆ ತಿಪ್ಲಾಪುರ ಇದಕ್ಕೊಂದು ಅಪವಾದ.

**ಉರ್ದು ಶಾಲೆಯಲ್ಲಿ ಕನ್ನಡ ಕಲಿಕೆಯ ಕಲರವ:-** ಸ.ಕಿ.ಪ್ರಾ.ಶಾಲೆ ತಿಪ್ಲಾಪುರ ಮೂರು ಶಿಕ್ಷಕರು ಮತ್ತು ಮುವ್ವತ್ತೆಂಟು ಮಕ್ಕಳನ್ನು ಹೊಂದಿರುವ ಪುಟ್ಟಶಾಲೆ. ತಿಪ್ಲಾಪುರ ಗ್ರಾಮದಲ್ಲಿ ಬಹುತೇಕ ಮುಸ್ಲಿಂ ಸಮುದಾಯದವರೇ ಇರುವುದರಿಂದ ಉರ್ದು ಭಾಷೆಯದ್ದೇ ಶಾಲೆ ಮತ್ತು ಸಮುದಾಯದಲ್ಲಿ ಪಾರುಪತ್ಯ. ಉರ್ದು ಭಾಷೆಯನ್ನು ಪ್ರಥಮ ಭಾಷೆಯನ್ನಾಗಿ ಶಾಲೆಯಲ್ಲಿ ಬೋಧಿಸಲಾಗುತ್ತಿದ್ದು ಇತರ ಶಾಲೆಗಳಂತೆ ಆಂಗ್ಲಭಾಷೆ ಮತ್ತು ಕನ್ನಡ ಭಾಷಾ ಕಲಿಕೆಯನ್ನು ವಿಶೇಷವಾಗಿ ನೀರೆರೆದು ಪೋಷಿಸಲಾಗುತ್ತಿದೆ. ಮುಖ್ಯ ಶಿಕ್ಷಕಿಯಾದ ಶ್ರೀಮತಿ ಚಿತ್ರಾ ಎಸ್ ರವರ ಪ್ರಯತ್ನದಿಂದಾಗಿ 2018-19 ನೇ ಸಾಲಿನಿಂದ ಉರ್ದು ನಲಿಕಲಿಯ ಜೊತೆಗೆ ಕನ್ನಡ ನಲಿಕಲಿಯನ್ನೂ ಸಹ ಅಳವಡಿಸಿಕೊಳ್ಳಲಾಯಿತು. ಶಿಕ್ಷಣ ಇಲಾಖೆಯಲ್ಲಿ ಶಾಲೆಗಳಿಗೆ ಒಂದು ಮಾಧ್ಯಮಕ್ಕೆ ಒಂದೇ ನಲಿಕಲಿ ವಿಭಾಗವನ್ನು ನೀಡಿದರೂ ಸಹಶಿಕ್ಷಕರ ಪ್ರಯತ್ನದಿಂದಾಗಿ ಕನ್ನಡ ನಲಿಕಲಿ ಆರಂಭವಾಗಿದ್ದು ವಿಶೇಷ. ಇರುವ ಉರ್ದು ನಲಿಕಲಿ ತರಗತಿ ಕೋಣೆಯಲ್ಲಿಯೇ ಕನ್ನಡವನ್ನೂ ಕೂಡಾ ಅಳವಡಿಸಿಕೊಳ್ಳಲಾಯಿತು. ಹೆಚ್ಚುವರಿ ಕನ್ನಡ ಕಾರ್ಡುಗಳು ಮತ್ತು ಕಲಿಕೋಪಕರಣಗಳನ್ನು ಕ್ಷೇತ್ರ ಸಂಪನ್ಮೂಲ ಕೇಂದ್ರದಿಂದ ಪಡೆಯಲಾಯಿತು. ಶ್ರೀಮತಿ ಚಿತ್ರಾರವರ ಪ್ರಯತ್ನದಿಂದಾಗಿ ಉರ್ದು ಭಾಷೆಯನ್ನು ಸರಾಗವಾಗಿ ಕಲಿತಂತೆಯೇ ಮಕ್ಕಳು ಕನ್ನಡವನ್ನು ಸರಾಗವಾಗಿ ಕಲಿಯತೊಡಗಿದರು. ಇದರಿಂದಾಗಿ ಉರ್ದು ಶಾಲೆಯ ಮಕ್ಕಳೂ ಕೂಡಾ ಕನ್ನಡವನ್ನು ಸರಾಗವಾಗಿ ಓದಲು, ಬರೆಯಲು ಅನುಕೂಲವಾಯಿತು.

**ಇಂಗ್ಲಿಷನ್ನು ಸರಾಗವಾಗಿ ಓದುವ ಮಕ್ಕಳು :-**

ಉರ್ದು ಮತ್ತು ಕನ್ನಡವನ್ನು ಸರಾಗವಾಗಿ ಓದಿ ಬರೆಯುವಂತೆಯೇ ಮಕ್ಕಳು ಇಂಗ್ಲೀಷನ್ನೂ ಕೂಡಾ ಸರಾಗವಾಗಿ ಓದುವುದು ಶಾಲೆಯ ಇನ್ನೊಂದು ಹೆಮ್ಮೆ. ಶಿಕ್ಷಕರಾದ ಶ್ರೀಮತಿ ಷಾಜಿಯಾ ತಬಸ್ಸುಮ್‌ರವರು ೧ ರಿಂದ ೫ ನೇ ತರಗತಿಯ ಎಲ್ಲಾ ಮಕ್ಕಳಿಗೂ ಆಸಕ್ತಿಯಿಂದ ಆಂಗ್ಲಭಾಷೆಯನ್ನು ಬೋಧಿಸುತ್ತಿದ್ದು ವಿಶೇಷ ಕಾಳಜಿಯನ್ನು







ವಹಿಸುತ್ತಾರೆ. ಕಲಿಕೆಗೆ ಅನುಕೂಲವಾಗುಂತಹ ಕಲಿಕೋಪಕರಣಗಳು, ತರಗತಿಯಲ್ಲಿ ಇಂಗ್ಲಿಷ್ ಮಾತನಾಡುವ ವಾತಾವರಣವನ್ನು ರೂಪಿಸುವುದು, ಭಾಷಾ ಆಟಗಳು ಮುಂತಾದ ತಂತ್ರಗಳ ಮೂಲಕ ಎಲ್ಲಾ ಮಕ್ಕಳೂ ಸರಾಗವಾಗಿ ಓದುವಂತೆ, ಬರೆಯುವಂತೆ ಕೌಶಲಗಳನ್ನು ಅಭಿವೃದ್ಧಿಪಡಿಸಿರುತ್ತಾರೆ. ಮಕ್ಕಳು ಅವರವರ ವಯೋಮಾನ ಮತ್ತು

ತರಗತಿಗಳಿಗನುಗುಣವಾದ ಉಕ್ತಲೇಖವನ್ನು ಬರೆಯುವರು. ಮಕ್ಕಳು ಈ ರೀತಿಯಾಗಿ ಇಂಗ್ಲಿಷನ್ನು ಸರಾವಾಗಿ ಓದುವುದು ಮತ್ತು ಬರೆಯುವುದು ಪೋಷಕರಿಗೂ ಹೆಮ್ಮೆಯ ವಿಷಯವೇ.

**ಅಂದದ ಚಂದದ ನಲಿಕಲಿ ವಾತಾವರಣ :-** ನಲಿಕಲಿ ತರಗತಿಯನ್ನು ಪ್ರವೇಶಿಸಿದ ಕೂಡಲೇ ಅಂದ-ಚಂದದ ಪ್ರಪಂಚದ ಒಳಹೊಕ್ಕ ಅನುಭವವನ್ನು ನೀಡುತ್ತದೆ. ಕಲಿಕಾ ಚಪ್ಪರವು ಮಕ್ಕಳೇ ರಚಿಸಿದ ಕ್ರಾಫ್ಟ್ ವಸ್ತುಗಳು, ಶಿಕ್ಷಕರು ಬರೆದು ನೇತು ಹಾಕಿದ ಕಲಿಕೋಪಕರಣಗಳಿಂದ ಅಲಂಕೃತವಾಗಿದೆ. ಒಪ್ಪವಾಗಿ ಜೋಡಿಸಿದ ಕಾರ್ಡುಗಳು, ದಾನಿಗಳು ಮತ್ತು ಶಿಕ್ಷಕರು ನೀಡಿದ ರೌಂಡ್ ಟೇಬಲ್‌ಗಳು ಮತ್ತು ಕುರ್ಚಿಗಳು, ಅಚ್ಚುಕಟ್ಟಾಗಿ ಜೋಡಿಸಿದ ಕಲಿಕೋಪಕರಣಗಳು, ಆಟೋಪಕರಣಗಳು, ಚಂದದ ವಾಲ್‌ಸ್ಲೇಟ್ ಕೊಠಡಿಗೆ ಮೆರುಗನ್ನು ನೀಡಿವೆ. 2018-19 ನೇ ನಡೆದ ನಲಿಕಲಿ ಮೈಕ್ರೋ ಅಧ್ಯಯನ ಮತ್ತು ಮ್ಯಾಕ್ರೋ ಅಧ್ಯಯನಗಳಲ್ಲಿ ಶೇ.೧೦೦ ರ ಸಾಧನೆ







ಮಾಡುವುದರೊಂದಿಗೆ ಅತ್ಯುತ್ತಮ ನಲಿಕಲಿ ಶಾಲೆಯೆಂದು ಗುರುತಿಸಲಾಗಿದೆ.

**ಪೂರ್ವ ಪ್ರಾಥಮಿಕ ಶಾಲೆ :-**

ಎಸ್‌ಡಿಎಂಸಿ ಮತ್ತು ಗ್ರಾಮಸ್ಥರ ನೆರವಿನಿಂದಾಗಿ 2019-20 ನೇ ಸಾಲಿನಲ್ಲಿ ಎಲ್‌ಕೆಜಿ ತರಗತಿಯನ್ನು ಪ್ರಾರಂಭಿಸಲಾಗಿದ್ದು ೦೭ ಮಕ್ಕಳು ದಾಖಲಾಗಿರುತ್ತಾರೆ. ಮಕ್ಕಳಿಗೆ ಅಗತ್ಯವಾದ ಪಠ್ಯಪುಸ್ತಕ ಸಮವಸ್ತ್ರದ ನೆರವನ್ನು ಶಿಕ್ಷಕರೇ ನೀಡಿರುತ್ತಾರೆ. ದಾಖಲಾತಿ ಹೆಚ್ಚಿಸುವ ಮತ್ತು ಗುಣಮಟ್ಟದ ಕಲಿಕೆಯನ್ನು ಉಂಟುಮಾಡುವ ನಿಟ್ಟಿನಲ್ಲಿ ಎಸ್‌ಡಿಎಮ್ಸಿ ಮತ್ತು ಗ್ರಾಮಸ್ಥರು ಇಟ್ಟಿರುವ ಈ ಹೆಜ್ಜೆ ಅಭಿನಂದನಾರ್ಹ.

**ಚಂದದ ಶಾಲಾ ಪರಿಸರ :-** ಚಿಕ್ಕದಾದರೂ ಶಾಲಾಪರಿಸರವನ್ನು ಚೊಕ್ಕವಾಗಿಡಲಾಗಿದೆ. ಕಸಕಡ್ಡಿಯ ಲವಲೇಶವೂ ಶಾಲಾವಾತಾವರಣದಲ್ಲಿ ಕಾಣಸಿಗುವುದಿಲ್ಲ. ಶಾಲೆಯ ಮುಂಭಾಗದಲ್ಲಿ ಬೆಳೆಸಲಾಗಿರುವ ತೆಂಗಿನ ಮರಗಳು ಶಾಲೆಗೆ ನೆರಳು ನೀಡಿ ಮೆರುಗನ್ನು ತಂದಿರುವುದಲ್ಲದೇ ಅವುಗಳಿಂದ ದೊರೆಯುವ ತೆಂಗಿನಕಾಯಿಗಳನ್ನು ಅಡುಗೆಗೆ ಬಳಸಲಾಗುತ್ತದೆ. ಶಾಲಾ ಶಿಸ್ತು ಅತ್ಯುತ್ತಮವಾಗಿದೆ. ಅನೇಕ ನಾವೀನ್ಯಯುತ ಮತ್ತು ಚಿಂತನಶೀಲ ಚಟುವಟಿಕೆಗಳು ಶಾಲೆಯನ್ನು ವಿಭಿನ್ನವಾಗಿಸಿವೆ. ಶಿಕ್ಷಕರಲ್ಲಿ ತಂಡದೋಪಾದಿಯಲ್ಲಿ ಕೆಲಸಮಾಡುವು ತುಡಿತಕಾಣುತ್ತದೆ. ಇದು ಶಾಲೆಯ ಗುಣಮಟ್ಟದ ಅಭಿವೃದ್ಧಿಗೆ ಕಾರಣವಾಗಿದೆ. ಇಂತಹ ಶಾಲೆಗಳು ಯಾವತ್ತೂ ಶೈಕ್ಷಣಿಕ ಕ್ಷೇತ್ರದಲ್ಲಿ ಅಮೂಲ್ಯ ರತ್ನಗಳಿದ್ದಂತೆ. ಸ.ಕಿ.ಪ್ರಾ.ಶಾಲೆ ತಿಪ್ಪಾಪುರವು ಇತರ ಶಾಲೆಗಳಿಗೆ, ಅದರಲ್ಲೂ ಉರ್ದು ಶಾಲೆಗಳಿಗೆ ಮಾದರಿಯಾಗಲಿ.







